<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಕುಂದಾಪುರ</u>

**ಸಿ.ಸಿ. ನಂಬ್ರ 1089/2023** **ಡಿ.ಡಬ್ಲ್ಯೂ- 1**

| | |
|---|---|
| ಸಾಕ್ಷಿದಾರರ ಹೆಸರು | ಪ್ರವೀಣ ಹೆಗ್ಡೆ |
| ತಂದೆಯ ಹೆಸರು | ಎ. ಬೋಜರಾಜ ಹೆಗ್ಡೆ |
| ಪ್ರಾಯ | 65 ವರ್ಷ |
| ಉದ್ಯೋಗ | ಗುತ್ತಿಗೆದಾರ |
| ವಾಸ | ಬಾರ್ಕೂರು |

ದಿನಾಂಕಃ **22-10-2024** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನ ಭೋದಿಸಲಾಯಿತು

<u>ಆರೋಪಿ ಪರ ಸಾಕ್ಷಿಯ ಮುಖ್ಯ ವಿಚಾರಣೆ : ಆರೋಪಿ ಪರ ವಕೀಲರಾದ ಶ್ರೀ . ಎಸ್ ಜಿ. ಎಸ್ ರವರಿಂದ</u>

ನಾನು ಸುಮಾರು 10 ವರ್ಷಗಳಿಂದ ಗುತ್ತಿಗೆದಾರನಾಗಿ ಉಡುಪಿಯ ಗುಂಡಿಬೈಲು ಎಂಬಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ಫಿರ್ಯಾದಿಯ ಪರಿಚಯ ಇಲ್ಲ. ಫಿರ್ಯಾದುದಾರರು ಯಾರು ಎಂದು ನನಗೆ ಗೊತ್ತಿಲ್ಲ. ನನಗೆ ನೋಟಿಸು ಬಂದಾಗ ಫಿರ್ಯಾದುದಾರರ ಬಗ್ಗೆ ಗೊತ್ತಾಗಿರುತ್ತದೆ. ಆ ನೋಟಿಸು ಕಾಳಾವರದ ಉದಯ ಶೆಟ್ಟಿ ಎಂಬ ವಕೀಲರಿಂದ ಬಂದಿತ್ತು. ಆ ನೋಟಿಸಿನಲ್ಲಿ ನಾನು ರೂ.9,60,000/- ಹಣ ಫಿರ್ಯಾದುದಾರರಿಂದ ಪಡೆದಿದ್ದು, ಅದಕ್ಕೆ ಚೆಕ್ಕನ್ನು ನೀಡಿದ್ದು, ಆ ಚೆಕ್ಕು ಬೌನ್ಸ ಆಗಿದ್ದು, ಆ ಹಣ ಮರುಪಾವತಿ ಮಾಡಬೇಕೆಂದು ತಿಳಿಸಲಾಗಿತ್ತು. ನೋಟಿಸಿನಲ್ಲಿ ಖಾತೆ ಡಾರಮೆಂಟ್ ಅಕೌಂಟ ಎಂದು ಚೆಕ್ಕು ಬೌನ್ಸ ಆಗಿರುವುದಾಗಿ ನಮೂದಾಗಿರುತ್ತದೆ.

ನನಗೆ ಫಿರ್ಯಾದುದಾರರ ಪರಿಚಯವೇ ಇಲ್ಲದ ಕಾರಣ ನೋಟಿಸನ್ನು ನೋಡಿ ಆಶ್ಚರ್ಯ ಆಗಿರುತ್ತದೆ. ನಾನು ಉಡುಪಿಯ ನಮ್ಮ ವಕೀಲರನ್ನು ಸಂಪರ್ಕಿಸಿ, ಅವರ ಮೂಲಕ ನೋಟಿಸಿಗೆ ಉತ್ತರ ನೀಡಿರುತ್ತೇನೆ. ನನ್ನ ಉತ್ತರದಲ್ಲಿ ಫಿರ್ಯಾದುದಾರರು ಯಾರು ಎಂದು ಗೊತ್ತಿಲ್ಲ ನನ್ನ ಮೇಲೆ ಸುಳ್ಳು ಕೇಸು ಹಾಕಿದ್ದಾರೆ ಎಂದು ಹೇಳಿರುತ್ತೇನೆ. ಸಾಕ್ಷಿಗೆ ನಿಪಿ-4 ರ ದಾಖಲೆಯನ್ನು ತೋರಿಸಲಾಗಿ, ಅದು ನನಗೆ ನೀಡಲಾದ ನೋಟಿಸ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ನಿಪಿ-7 ರ ದಾಖಲೆಯನ್ನು ತೋರಿಸಲಾಗಿ, ಅದು ನಾನು ನೋಟಿಸಿಗೆ ನೀಡಲಾದ ಉತ್ತರ ಎಂದು ನುಡಿದಿರುತ್ತಾರೆ.

ನಾನು ಉತ್ತರ ಕೊಟ್ಟ 4-5 ದಿನಗಳ ನಂತರ ನನಗೆ ಫಿರ್ಯಾದುದಾರರಿಂದ ಕರೆ ಬಂದಿದ್ದು, ನಾನು ತಪ್ಪಾಗಿ ನೋಟಿಸು ನೀಡಿದ್ದು, ಪ್ರಕರಣ ದಾಖಲಿಸುವುದಿಲ್ಲ ಎಂದು ತಿಳಿಸಿರುತ್ತಾರೆ. ನಿಪಿ-2 ರ ಚೆಕ್ಕನ್ನು ಸಾಕ್ಷಿಗೆ ತೋರಿಸಲಾಗಿ, ಅದು ನನ್ನ ಖಾತೆಗೆ ಸಂಬಂಧಿಸಿ ಚೆಕ್ಕು ಮತ್ತು ಅದರಲ್ಲಿರುವ ಸಹಿ ನನ್ನದೇ ಎಂದು ಒಪ್ಪಿಕೊಂಡಿರುತ್ತಾರೆ. ನಿಪಿ-2 ರ ಚೆಕ್ಕಿನಲ್ಲಿರುವ ಸಹಿಯನ್ನು ಹೊರತುಪಡಿಸಿ ಉಳಿದ ಹಸ್ತಾಕ್ಷರಗಳು ನನ್ನದಲ್ಲ. ಸಾಕ್ಷಿಯು ಚೆಕ್ಕಿನಲ್ಲಿರುವ ಸಹಿಯನ್ನು ಒಪ್ಪಿಕೊಂಡ ಮೇರೆಗೆ ಅದನ್ನು ನಿಪಿ-2(ಎ) ಎಂದು ಗುರುತಿಸಲಾಗಿರುತ್ತದೆ.

ನನ್ನ ಸ್ನೇಹಿತರಾದ ಕಾಳಾವರದ ಅರವಿಂದ ಹೆಗ್ಡೆ ಅವರ ಬಳಿ ನಾನು ಸಾಲ ಕೇಳಿದ್ದೆ. ಅವರು ಕಾಳಾವರದ ಉದಯ ಶೆಟ್ಟಿರವರ ಬಳಿ ರೂ. 2 ಲಕ್ಷ ಹಣ ಪಡೆಯುವಂತೆ ಮತ್ತು ಅವರಿಗೆ ಚೆಕ್ಕನ್ನು ನೀಡುವಂತೆ ತಿಳಿಸಿರುತ್ತಾರೆ. ನಂತರ ಕಾಳಾವರದ ಉದಯ ಶೆಟ್ಟಿರವರನ್ನು ಕೋಟೇಶ್ವರದ ಅವರ ಪ್ಲ್ಯಾಟನಲ್ಲಿ ಭೇಟಿ ಮಾಡಿದ್ದು, ಅವರು ರೂ. 2 ಲಕ್ಷ ಹಣಕ್ಕೆ ಕುಂದಾಪುರ ಶಾಖೆಯ ಎಚ್ ಡಿ ಎಫ್ ಸಿ ಬ್ಯಾಂಕಿನ ಬೇರರ್ ಚೆಕ್ಕನ್ನು ಕೊಟ್ಟಿರುತ್ತಾರೆ. ನಾನು ಅವರಿಗೆ ಖಾಲಿ ಚೆಕ್ಕನ್ನು ಕೊಟ್ಟಿರುತ್ತೇನೆ. ನನಗೆ ಕೊಟ್ಟ ಚೆಕ್ಕನ್ನು ಕುಂದಾಪುರದ ಬ್ಯಾಂಕಿನಲ್ಲಿ ನಗದೀಕರಣ ಮಾಡಿರುತ್ತೇನೆ.

ನಂತರ ನಾನು ಅರವಿಂದ ಹೆಗ್ಡೆಯವರ ಸೂಚೆಯ ಮೇರೆಗೆ ಅವರ ಮ್ಯಾನೇಜರ ಆದ ಭಾಸ್ಕರ ರವರ ವಿಜಯಾ ಬ್ಯಾಂಕ ಖಾತೆಗೆ ಭಾಗಶಃ ಹಣವನ್ನು ಡಿಪಾಸಿಟ್ ಮಾಡಿರುತ್ತೇನೆ. ಉಳಿದ ಹಣವನ್ನು ಅರವಿಂದ ಹೆಗ್ಡೆರವರು ಗುಂಡಿಬೈಲುವಿನಲ್ಲಿರುವ ನನ್ನ ಆಫೀಸಿಗೆ ಬಂದಾಗ ಕೊಟ್ಟಿರುತ್ತೇನೆ. ಆಗ ಅವರು ಬಡ್ಡಿ ಬಾಕಿ ಇದೆ ಎಂದು ಹೇಳಿರುತ್ತಾರೆ. ನಾನು ಅರವಿಂದ ಹೆಗ್ಡೆ ಮತ್ತು ಶಿವಪ್ರಸಾದ ಶೆಟ್ಟಿ ರವರ ನಡುವಿನ ವ್ಯವಹಾರವನ್ನು ನಾನು ರಾಜಿ ಮಾಡಿಸಿದ ಕಾರಣ ನೀವು ನನಗೆ ಕೊಡುವುದು ಬೇಡ ಎಂದು ಹೇಳಿರುತ್ತಾರೆ. ಆ ಸಮಯದಲ್ಲಿ ನಾನು ಚೆಕ್ಕನ್ನು ಕೇಳಿದ್ದು, ಅವರು ಉದಯಕುಮಾರ ಶೆಟ್ಟಿರವರಿಗೆ ಕರೆ ಮಾಡಿದ್ದು, ಅವರು ಚೆಕ್ಕನ್ನು ಬೇರೆ ಎಲ್ಲೋ ಇಟ್ಟಿರುವುದಾಗಿ ಹೇಳಿರುತ್ತಾರೆ.

ಇದಾದ 15 ದಿನಗಳ ನಂತರ ಸಂದೀಪಕುಮಾರ ಶೆಟ್ಟಿರವರ ಹೆಸರಿನಲ್ಲಿ ನನಗೆ ನೋಟಿಸು ಬಂದಿರುತ್ತದೆ. ನೋಟಿಸಿನಲ್ಲಿ ಚೆಕ್ಕಿನ ನಂಬರನ್ನು ನಮೂದಿಸದೇ ಇದ್ದ ಕಾರಣ ನನ್ನ ವ್ಯವಹಾರಕ್ಕೆ ಸಂಬಂಧಿಸಿದಂತೆ ಇರಬಹುದು ಎಂದು ಅಂದುಕೊಂಡಿದ್ದೆ. ಸಂದೀಪರವರಿಂದ ನನಗೆ ಕರೆ ಬಂದಿದ್ದು, ಅವರು ತಪ್ಪಾಗಿ ನೋಟಿಸು ನೀಡಿದ್ದು, ವಾಪಾಸ್ಸು ತೆಗೆಯುವುದಾಗಿ ಹೇಳಿದ ಕಾರಣ ನಾನು ದೂರನ್ನು ನೀಡಿರುವುದಿಲ್ಲ. ನಮ್ಮ ವಕೀಲರು ದೂರು ನೀಡಲು ಹೇಳಿರುತ್ತಾರೆ. ನಾನು ದೂರು ನೀಡದಂತೆ ತಡೆಯಲು ಈ ರೀತಿ ಯೋಜನೆ ಮಾಡಿರುತ್ತಾರೆ. ನಂತರ ನನಗೆ ನ್ಯಾಯಾಲಯದಿಂದ ನೋಟಿಸು ಬಂದಿರುತ್ತದೆ.

ನನಗೆ ಫಿರ್ಯಾದಿದಾರ ಯಾರು ಎಂದು ಗೊತ್ತಿಲ್ಲದ ಕಾರಣ, ನಾನು ಅವರಿಗೆ ಯಾವುದೇ ಹಣ ಕೊಡಲು ಬಾಕಿ ಇಲ್ಲ. ನಾನು ಅರವಿಂದ ಹೆಗ್ಡೆ ಮತ್ತು ಉದಯಕುಮಾರ ಶೆಟ್ಟಿರವರಿಗೆ ಹಣ ಕೊಡಲು ಬಾಕಿ ಇರುವುದಿಲ್ಲ. ನಾನು ಕಾರನ್ನು ಖರೀದಿಸುವ ಸಮಯದಲ್ಲಿ ಚೆಕ್ಕಿನಲ್ಲಿ ಮೂದಿಸಿರುವ ಖಾತೆ ತೆರೆದಿರುತ್ತೇನೆ. ನಾನು ಈ ಚೆಕ್ಕನ್ನು ಉದಯಕುಮಾರ ಶೆಟ್ಟಿರವರಿಗೆ ಕೊಡುವ ಸಮಯದಲ್ಲಿ ಈ ಖಾತೆ ಚಾಲ್ತಿಯಲ್ಲಿತ್ತು. ನಂತರ ನಾನು ಅಲ್ಲಿ ವ್ಯವಹರಿಸದ ಕಾರಣ ನನ್ನ ಖಾತೆ ಡಾರಮೆಂಟ್ ಅಕೌಂಟ ಆಗಿರುತ್ತದೆ.

**(ಆರೋಪಿ ಪರ ವಕೀಲರ ಕೋರಿಕೆಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ. ಇದೆ.

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
ಮತ್ತು ಜೆ.ಎಂ.ಎಫ್.ಸಿ., ಕುಂದಾಪುರ.